**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**<u>C.C. No.1009/2021</u>**

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿ ವಿಚಾರಣೆ</u>**

**CW- 1** **PW:1**

| | | |
|---|---|---|
| ಸಾಕ್ಷಿಯ ಹೆಸರು | ಃ | ನರಸಿಂಹ ಮೂರ್ತಿ |
| ತಂದೆ /ಗಂಡನ ಹೆಸರು | ಃ | ಗಂಗಪ್ಪ |
| ವಯಸ್ಸು | ಃ | 48 ವರ್ಷ |
| ಉದ್ಯೋಗ | ಃ | ಬಾಡಿ ಶಾಪ್ ಮ್ಯಾನೇಜರ್, ರೇವಣಕರ ಮೋಟರ್ಸ್ |
| ವಾಸಸ್ಥಳ | ಃ | ಹುಬ್ಬಳ್ಳಿ |

ದಿಃ **31.10.2025.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಈ ಮೊದಲು ನಾನು ಓಕ್ಸ ವ್ಯಾಗನ್ ಕಾರ್ ಸರ್ವಿಸ್ ಕಂಪನಿಯಲಿಲ ಸರ್ವಿಸ್ ಮ್ಯಾನೇಜರ್ ಅಂತಾ ಎಪಿಎಂಸಿ ಎದುರುಗಡೆ ಇದ್ದ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು 2013 ರಿಂದ 2017 ರವರೆಗೂ ಸರ್ವಿಸ್ ಮ್ಯಾನೇಜರ್ ಅಂತಾ ಕಾರ್ಯನಿರ್ವಹಿಸಿದ್ದೆ. ನಾನು ಕಾರ್ಯನಿರ್ವಹಿಸುವಾಗ ದಿಃ 29.05.2013 ರಂದು ನಮ್ಮ ಕಂಪನಿಯಲ್ಲಿ 4 ಎಚ್ ಸಿ ಎಲ್ ಕಂಪನಿಯ ಮಾನಿಟರ್ ಕಳ್ಳತನ ಆಗಿದೆ ಅಂತಾ ದಿಃ 30.05.2013 ರಂದು ಕಚೇರಿಗೆ ಬಂದಾಗ ಗೊತ್ತಾಯಿತು. ಅವುಗಳ ಕಿಮ್ಮತ್ತು ಒಟ್ಟು ರೂ 20 ಸಾವಿರ. ನಂತರ ಎಪಿಎಂಸಿ ನವನಗರ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟೆ. ದಿಃ 12.11.2013 ರಂದು ಪೊಲಿಸರು ನನ್ನನ್ನು ಕರೆಸಿ ಠಾಣೆಯಲ್ಲಿ ಒಂದು ಮಾನಿಟರ್ ತೋರಿಸಿದರು. ಅದನ್ನು ನೋಡಿದಾಗ ಅದು ನಮ್ಮದು ಅಂತಾ ಗೊತ್ತಾಯಿತು. ಇನ್ನು ಮೂರು ಸಿಕ್ಕಿಲ್ಲ ಅಂತಾ ಹೇಳಿದರು. ಅಲ್ಲಿ ಒಬ್ಬ ವ್ಯಕ್ತಿಯನ್ನು ಪೊಲಿಸರು ತೋರಿಸಿದರು ಆತನನ್ನು ಸಿಸಿಟಿವಿಯಲ್ಲಿ ತೋರಿಸಿದ್ದರಿಂದ ಗುರುತಿಸಿದ್ದು ಅವನ ಹೆಸರು ಲಕ್ಷ್ಮಣ ಅಂತಾ ಗೊತ್ತಾಯಿತು.ಈ ಮಾನಿಟರನ್ನು ಪೊಲಿಸನವರು ಕಿರಣ ಎನ್ನುವ ವ್ಯಕ್ತಿಯಿಂದ ವಶಪಡಿಸಿಕೊಂಡಿದ್ದೇವೆ ಅಂತಾ ತಿಳಿಸಿದರು. ಈ ಬಗ್ಗೆ ಪೊಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ. ಪೊಲಿಸನವರು ದಿಃ 30.05.2013 ರಂದು ನಮ್ಮ ಕಂಪನಿಗೆ ಬಂದರು. ಮಾನಿಟರಗಳು ಇರುವ ಜಾಗೆಯ ಪೊಟೊ ಹಾಗೂ ನಮ್ಮಗಳ ಪೊಟೊ ತೆಗೆದರು. ಪೊಲಿಸರು ಬಂದಾಗ

ನಾನೇ ಸ್ಥಳ ತೋರಿಸಿದೆ. ಜಾಗ ತೋರಿಸುವಾಗ ಇನ್ನು ಇಬ್ಬರಿದ್ದರು ಅವರ ಹೆಸರು ಗೊತ್ತಿಲ್ಲ. ನಾನು ನೀಡಿದ ದೂರಿನ ನಿಜಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಪೊಲಿಸರು ದಿಃ 30.05.2013 ರಂದು ಮದ್ಯಾಹ್ನ 1 ಗಂಟೆಯಿಂದ 2 ಗಂಟೆಯವರೆಗೆ ನಮ್ಮ ಕಂಪನಿಯಲ್ಲಿ ಸ್ಥಳ ಪಂಚನಾಮೆ ಮಾಡಿದರು ಎಂದರೆ ಸರಿ. ಆ ದಿವಸ ನನ್ನ ಜೊತೆ ಚಾಸಾಃ 2 ಮತುತ 3 ರವರು ಪಂಚರಾಗಿ ಇದ್ದರು ಎಂದರೆ ಸರಿ.

**ಆರೋಪಿಯು ಪರಾರಿಯಾಗಿರುತ್ತಾನೆ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.